# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **898** |
| ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 14-07-2023 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಕೃಷಿ ಇಲಾಖೆ ಅಡಿಯಲ್ಲಿ ಫುಡ್ ಕರ್ನಾಟಕ ಲಿಮಿಟೆಡ್ ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದೆಯೇ: | ಹೌದು. |
| ಆ) | ಹಾಗಿದ್ದಲ್ಲಿ ಈ ಸಂಸ್ಥೆಯ ಧ್ಯೇಯೋದ್ದೇಶಗಳೇನು ಮತ್ತು ಈ ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದವರು ಯಾರು ; (ಪೂರ್ಣ ಮಾಹಿತಿ ನೀಡುವುದು) | **ಸಂಸ್ಥೆಯ ಮುಖ್ಯ ಉದ್ದೇಶಗಳು**<br>1. ಕರ್ನಾಟಕದಲ್ಲಿ ಕೃಷಿ/ಆಹಾರ ಸಂಸ್ಕರಣಾ ಉದ್ಯಮವನ್ನು ಉತ್ತೇಜಿಸುವುದು ಮತ್ತು ಆಹಾರ ಪಾರ್ಕ್‌ಗಳ ಸ್ಥಾಪನೆಯಲ್ಲಿ ಖಾಸಗಿ ವಲಯದ ಹೂಡಿಕೆಯನ್ನು ಪ್ರೋತ್ಸಾಹಿಸುವುದು.<br>2. ಕೃಷಿ ಮತ್ತು ಆಹಾರ ಕೈಗಾರಿಕೆಗಳನ್ನು ಸ್ಥಾಪಿಸಲು ಉದ್ದೇಶಿಸಿರುವ ಉದ್ಯಮಿಗಳಿಗಾಗಿ ವಸ್ತು ಪ್ರದರ್ಶನಗಳು, ವ್ಯಾಪಾರ ಮೇಳಗಳು, ವಿಚಾರ ಸಂಕಿರಣಗಳು, ಮಾರುಕಟ್ಟೆ ಸಂಶೋಧನೆ ಮುಂತಾದವುಗಳನ್ನು ಆಯೋಜಿಸಲು ಎಲ್ಲಾ ರೀತಿಯಲ್ಲಿ ಬೆಂಬಲನೀಡಿ ಪ್ರೋತ್ಸಾಹಿಸುವುದು.<br>3. ರಾಜ್ಯದಲ್ಲಿ ಆಹಾರ ಪಾರ್ಕ್‌ಗಳ ಅನುಷ್ಠಾನದ ಮೇಲ್ವಿಚಾರಣೆ ಮತ್ತು ಉಸ್ತುವಾರಿ ಕೈಗೊಳ್ಳುವುದು.<br>4. ಕೊಯ್ಲಿನ ನಂತರದ ನಷ್ಟವನ್ನು ಕಡಿಮೆ ಮಾಡುವುದು, ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಮತ್ತು ಸಂಸ್ಕರಣೆ ಮತ್ತು ಮೌಲ್ಯವರ್ಧನೆಯ ಮಟ್ಟವನ್ನು ಹೆಚ್ಚಿಸುವುದು.<br>**ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವವರು**<br>**ಅಧ್ಯಕ್ಷರು** : ಕೃಷಿ ಸಚಿವರು<br>**ಉಪಾಧ್ಯಕ್ಷರು** : ತೋಟಗಾರಿಕೆ ಸಚಿವರು |

| | | |
|---|---|---|
| | | **ನಿರ್ದೇಶಕರುಗಳು:**<br>• ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಕೃಷಿ ಇಲಾಖೆ<br>• ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ.<br>• ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ<br>• ವಿಶೇಷ ಕಾರ್ಯದರ್ಶಿ, ಆಹಾರ ಸಂಸ್ಕರಣೆ ಮತ್ತು ಕಟಾವು ತಂತ್ರಜ್ಞಾನ.<br>• ಆಯುಕ್ತರು, ಕೈಗಾರಿಕಾ ಅಭಿವೃದ್ಧಿ ಮತ್ತು ನಿರ್ದೇಶಕರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.<br>• ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (KIADB).<br>• ನಿರ್ದೇಶಕರು, ತೋಟಗಾರಿಕೆ ಇಲಾಖೆ.<br>• ನಿರ್ದೇಶಕರು, ಕೃಷಿ ಇಲಾಖೆ.<br>• ನಿರ್ದೇಶಕರು, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ.<br>• ನಿರ್ದೇಶಕರು, ಮೀನುಗಾರಿಕೆ ಇಲಾಖೆ.<br>• ವ್ಯವಸ್ಥಾಪಕ ನಿರ್ದೇಶಕರು, ಆಹಾರ ಕರ್ನಾಟಕ ನಿಯಮಿತ – ಸದಸ್ಯ ಕಾರ್ಯದರ್ಶಿ. |
| ಇ) | ರಾಜ್ಯದ ವಿವಿಧ ಕೈಗಾರಿಕೆ ಅಭಿವೃದ್ಧಿ ಪ್ರದೇಶಗಳಲ್ಲಿ ಸ್ಥಾಪಿತವಾಗಿರುವ ಖಾಸಗಿ ಮತ್ತು ಸರ್ಕಾರಿ ಸಾಮ್ಯದ ಫುಡ್ ಪಾರ್ಕ್‌ಗಳು ಯಾವುವು; ಮತ್ತು ಫುಡ್ ಪಾರ್ಕ್‌ಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮತ್ತು ಫುಡ್ ಕರ್ನಾಟಕ ಲಿಮಿಟೆಡ್ ಸಂಸ್ಥೆ ನೀಡುತ್ತಿರುವ ನೆರವು ಪ್ರೋತ್ಸಾಹ ಮತ್ತು ಬೆಂಬಲಗಳು ಯಾವುವು: (ಪೂರ್ಣ ಮಾಹಿತಿ ನೀಡುವುದು) | **ಅ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಿರುವ ಆಹಾರ ಪಾರ್ಕುಗಳು.**<br>1. ಇನ್ನೋವ ಅಗ್ರಿ ಬಯೋ ಪಾರ್ಕ್, ಮಾಲೂರು<br>2. ಗ್ರೀನ್ ಫುಡ್ ಪಾರ್ಕ್, ಬಾಗಲಕೋಟೆ<br>3. ಅಕ್ಷಯ ಫುಡ್ ಪಾರ್ಕ್, ಹಿರಿಯೂರು<br>4. ಜೇವರ್ಗಿ ಅಗ್ರೋ ಫುಡ್ ಪಾರ್ಕ್, ಜೇವರ್ಗಿ<br>**ಆ. ಕೇಂದ್ರ ಸರ್ಕಾರ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿರುವ ಆಹಾರ ಪಾರ್ಕುಗಳು** (ಕೇಂದ್ರ ಸರ್ಕಾರದ ನೇರ |

<table>
<tr>
<td></td>
<td></td>
<td>ಉಸ್ತುವಾರಿ ಮತ್ತು ಸಹಾಯಧನ ಬಿಡುಗಡೆ)<br><br>1. ಮೆ. ಇಂಡಿಯಾ ಮೆಗಾ ಫುಡ್‌ಪಾರ್ಕ್, ತುಮಕೂರು<br><br>2. ಮೆ. ಫೆವೋರಿಚ್ ಮೆಗಾ ಫುಡ್‌ಪಾರ್ಕ್, ಕೆ.ಆರ್. ಪೇಟೆ ತಾಲ್ಲೂಕು, ಮಂಡ್ಯಜಿಲ್ಲೆ<br><br>ಫುಡ್ ಪಾರ್ಕ್ ಸ್ಥಾಪನೆಯ ಮಾರ್ಗಸೂಚಿಗಳ ಅನುಸಾರ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಿರುವ ಆಹಾರ ಪಾರ್ಕುಗಳಿಗೆ ಫುಡ್ ಕರ್ನಾಟಕ ಲಿಮಿಟೆಡ್ ಮುಖಾಂತರ ಈ ಕೆಳಗೆ ತಿಳಿಸಿರುವಂತೆ ಸಹಾಯಧನವನ್ನು ನೀಡಲಾಗಿರುತ್ತದೆ.<br><br>(ರೂ. ಕೋಟಿಗಳಲ್ಲಿ)
<table>
<tr><th rowspan="2">ಆಹಾರ ಪಾರ್ಕ್</th><th colspan="2">ಸಹಾಯಧನ</th></tr>
<tr><th>ಕೇಂದ್ರ ಸರ್ಕಾರ</th><th>ರಾಜ್ಯ ಸರ್ಕಾರ</th></tr>
<tr><td>ಇನ್ನೋವ ಅಗ್ರಿ ಬಯೋ ಪಾರ್ಕ್, ಮಾಲೂರು</td><td>4.00</td><td>4.00</td></tr>
<tr><td>ಗ್ರೀನ್ ಫುಡ್ ಪಾರ್ಕ್, ಬಾಗಲಕೋಟೆ</td><td>3.00</td><td>4.00</td></tr>
<tr><td>ಅಕ್ಷಯ ಫುಡ್ ಪಾರ್ಕ್, ಹಿರಿಯೂರು</td><td>4.00</td><td>4.00 *</td></tr>
<tr><td>ಜೇವರ್ಗಿ ಅಗ್ರೋ ಫುಡ್ ಪಾರ್ಕ್, ಜೇವರ್ಗಿ</td><td>4.00</td><td>4.00</td></tr>
</table>
* ಅಕ್ಷಯ ಫುಡ್ ಪಾರ್ಕ್‌ಗೆ ರಾಜ್ಯ ಸರ್ಕಾರದಿಂದ ರೂ.4.00 ಕೋಟಿಗಳನ್ನು ಸಾಲದ ರೂಪದಲ್ಲಿ (Unsecured Loan) ನೀಡಲಾಗಿರುತ್ತದೆ.</td>
</tr>
<tr>
<td>ಊ)</td>
<td>ರಾಜ್ಯದಲ್ಲಿ ಕೇಂದ್ರ – ರಾಜ್ಯ ಮತ್ತು ಖಾಸಗಿ ಸಹಭಾಗಿತ್ವ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಸ್ಥಾಪಿತವಾಗಿರುವ ಫುಡ್ ಪಾರ್ಕ್‌ಗಳು ನಿರೀಕ್ಷಿತ ಮಟ್ಟ ತಲುಪದಿರುವುದರಿಂದ ನಿಷ್ಕ್ರಿಯ ವಾಗಿರುವ ಫುಡ್ ಕರ್ನಾಟಕ ಲಿಮಿಟೆಡ್ ಸಂಸ್ಥೆಯನ್ನು ಪುನಶ್ಚೇತನ ಗೊಳಿಸಿ, ಫುಡ್ ಪಾರ್ಕ್‌ಗಳನ್ನು</td>
<td>ಕೇಂದ್ರ – ರಾಜ್ಯ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗಿರುವ ಆಹಾರ ಪಾರ್ಕುಗಳಲ್ಲಿ ಇರುವ ಮೂಲಭೂತ ಸೌಕರ್ಯಗಳು ಹಾಗೂ ಕಾರ್ಯ ನಿರ್ವಹಿಸುತ್ತಿರುವ ಹಾಗೂ ಆಹಾರ ಪಾರ್ಕ್‌ಗಳಲ್ಲಿ ಆಹಾರ ಸಂಸ್ಕರಣಾ ಉದ್ಯಮಗಳ ಕಾರ್ಯನಿರ್ವಹಣೆಯ</td>
</tr>
</table>

| | | |
|---|---|---|
| | ಕಾರ್ಯೋನ್ಮುಖ ವಾಗಲು ರಾಜ್ಯ ಸರ್ಕಾರ ಕ್ರಮ ವಹಿಸುವುದೇ; ಹಾಗಿದ್ದಲ್ಲಿ, ಪೂರ್ಣ ಮಾಹಿತಿ ನೀಡುವುದು? | ವಸ್ತುಸ್ಥಿತಿಯ ವಿವರಗಳನ್ನು **ಅನುಬಂಧ-1 ಮತ್ತು ಅನುಬಂಧ-2** ರಲ್ಲಿ ನೀಡಲಾಗಿದೆ.<br><br>ಈ ಆಹಾರ ಪಾರ್ಕುಗಳು ಸೂಕ್ತ ಸಂಪರ್ಕ ರಸ್ತೆ ಕೊರತೆ, ನಿರೀಕ್ಷಿತ ಪ್ರಮಾಣದಲ್ಲಿ ನೀರಿನ ಅಲಭ್ಯತೆ, ಲೀಸ್ ಅವಧಿ ವಿಸ್ತರಣೆಯಾಗದಿರುವುದು, ಆಹಾರ ಪಾರ್ಕ್ ಉದ್ದಿಮೆದಾರರಿಗೆ ಬ್ಯಾಂಕುಗಳಲ್ಲಿ ಸಾಲ ದೊರೆಯದೇ ಇರುವುದು ಈ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿದ್ದು ನಿರೀಕ್ಷಿತ ಮಟ್ಟದಲ್ಲಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮಾಲೋಚಿಸಿ ಆಹಾರ ಪಾರ್ಕುಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

*ಕೃ ಇ 54 ಎಎಂಎಸ್ 2023*

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು

**ಅನುಬಂಧ-1** (LCQ:898)

## ಕೇಂದ್ರ – ರಾಜ್ಯ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗಿರುವ ಆಹಾರ ಪಾರ್ಕ್‌ಗಳಲ್ಲಿ ಇರುವ ಮೂಲಭೂತ ಸೌಕರ್ಯಗಳು

| ಆಹಾರ ಪಾರ್ಕ್ | ಸ್ಥಾಪಿಸಲಾಗಿರುವ ಮೂಲಭೂತ ಸೌಕರ್ಯಗಳು |
|---|---|
| ಅಕ್ಷಯ ಫುಡ್ ಪಾರ್ಕ್, ಹಿರಿಯೂರು | ➢ ಶೀತಲಗೃಹ, ಉಗ್ರಾಣ<br>➢ ವಾಣಿಜ್ಯ ಇಂಕ್ಯುಬೇಷನ್ ಕೇಂದ್ರ<br>➢ ಗ್ರೇಡಿಂಗ್ ಮತ್ತು ಪ್ಯಾಕಿಂಗ್ ಲೈನ್‌ಗಳು (ಶುಷ್ಕ ಮತ್ತು ತೇವ)<br>➢ ವ್ಯಾಪಾರ ಕೇಂದ್ರ<br>➢ ಗುಣಮಟ್ಟದ ಭರವಸೆಯ ಪ್ರಯೋಗಾಲಯ, ಉತ್ಪನ್ನ ಅಭಿವೃದ್ಧಿ ಪ್ರಯೋಗಾಲಯ<br>➢ ಆಡಳಿತ ಕಚೇರಿ ಮತ್ತು ಸಂಬಂಧಿತ ಸೌಲಭ್ಯಗಳು<br>➢ ಕಾನ್ಫರೆನ್ಸ್ ಹಾಲ್, ತೂಕದ ಯಂತ್ರ<br>➢ ದಾಳಿಂಬೆ ಸಂಸ್ಕರಣಾ ಘಟಕ<br>➢ ಪಚೌಲಿ ತೈಲ ಹೊರತೆಗೆಯುವ ಘಟಕ ಮತ್ತು<br>➢ ETP |
| ಜೇವರ್ಗಿ ಅಗ್ರೋ ಫುಡ್ ಪಾರ್ಕ್ ಲಿಮಿಟೆಡ್, ಜೇವರ್ಗಿ | ➢ ಶೀತಲಗೃಹ<br>➢ ಉಗ್ರಾಣ<br>➢ ಪರೀಕ್ಷಾ ಪ್ರಯೋಗಾಲಯ<br>➢ ವಿಂಗಡಣೆ ಮತ್ತು ಗ್ರೇಡಿಂಗ್ ಲೈನ್<br>➢ ಎಫ್ಲುಯೆಂಟ್ ಟ್ರೀಟ್ಮೆಂಟ್ ಪ್ಲಾಂಟ್ (ಇಟಿಪಿ) |
| ಗ್ರೀನ್ ಫುಡ್ ಪಾರ್ಕ್ ಲಿಮಿಟೆಡ್, ಬಾಗಲಕೋಟೆ | ➢ ಶೀತಲಗೃಹ<br>➢ ಉಗ್ರಾಣ<br>➢ ವಾಷಿಂಗ್ ಮತ್ತು ಗ್ರೇಡಿಂಗ್ ಯಂತ್ರ<br>➢ ತೂಕದ ಯಂತ್ರ |
| ಇನ್ನೋವಾ ಅಗ್ರಿ ಬಯೋ ಪಾರ್ಕ್ ಲಿಮಿಟೆಡ್, ಮಾಲೂರು | ➢ ಶೀತಲ ಗೃಹ ಮತ್ತು ಪ್ಯಾಕ್ ಹೌಸ್<br>➢ ಉಗ್ರಾಣ, ಸಂಸ್ಕರಣೆ ಮತ್ತು ಪ್ಯಾಕೇಜಿಂಗ್<br>➢ ವಿಂಗಡಣೆ ಮತ್ತು ಶ್ರೇಣೀಕರಣ<br>➢ ಆಹಾರ ಪರೀಕ್ಷಾ ಪ್ರಯೋಗಾಲಯ<br>➢ ಗಾಮಾ ವಿಕಿರಣ ಘಟಕ<br>➢ ಹಣ್ಣು ಮಾಗಿಸುವ ಕೋಣೆಗಳು ಮತ್ತು ಬಿಸಿನೀರಿನ ಸಂಸ್ಕರಣಾ ಸೌಲಭ್ಯ<br>➢ ಗಾಮಾ ವಿಕಿರಣ ಸೌಲಭ್ಯವನ್ನು ಬಳಸಿಕೊಂಡು USA ಮತ್ತು ಆಸ್ಟ್ರೇಲಿಯಾಕ್ಕೆ ಮಾವಿನಹಣ್ಣುಗಳನ್ನು ರಫ್ತು ಮಾಡಲಾಗುತ್ತಿದೆ. |

ಅನುಬಂಧ-2 (LCQ ೮೯೮)

## ಆಹಾರ ಪಾರ್ಕ್‌ಗಳಲ್ಲಿ ಆಹಾರ ಸಂಸ್ಕರಣಾ ಉದ್ಯಮಗಳ ಕಾರ್ಯನಿರ್ವಹಣೆಯ ವಸ್ತುಸ್ಥಿತಿ

| ಆಹಾರ ಪಾರ್ಕ್‌ನ ಹೆಸರು (ಮಂಜೂರಾಗಿರುವ ಒಟ್ಟು ಭೂಮಿ) | ಕೈಗಾರಿಕೆಗಳಿಗೆ ಮಂಜೂರಾದ ಭೂಮಿಯ ವಿಸ್ತಾರ | ಭೂಮಿ ಮಂಜೂರು ಮಾಡಿದ ಘಟಕಗಳ ಒಟ್ಟು ಸಂಖ್ಯೆ | ಬಾಕಿ ಮತ್ತು ಹಂಚಿಕೆಗೆ ಲಭ್ಯವಿರುವ ಭೂಮಿ | ಕಾರ್ಯನಿರ್ವಹಣೆಯ ಸ್ಥಿತಿ | |
|---|---|---|---|---|---|
| | | | | ಕಾರ್ಯನಿರ್ವಹಿಸುತ್ತಿರುವ ಘಟಕಗಳು | ಇನ್ನೂ ಪ್ರಾರಂಭವಾಗಬೇಕಿರುವ ಘಟಕ |
| ಅಕ್ಷಯ ಫುಡ್ ಪಾರ್ಕ್, ಹಿರಿಯೂರು (106 acres 37 guntas) | 48 ಎಕರೆ | 67 | 12 acres (ಗೋದಾಮು ಮತ್ತು ಲಾಜಿಸ್ಟಿಕ್ ಹಬ್‌ಗಾಗಿ ಕಾಯ್ದಿರಿಸಲಾಗಿದೆ) | 10 (7 ಪ್ರಗತಿಯಲ್ಲಿದೆ) | 50 |
| ಜೇವರ್ಗಿ ಆಗ್ರೋ ಫುಡ್ ಪಾರ್ಕ್, ಜೇವರ್ಗಿ (105 acres) | 56 ಎಕರೆ | 119 | 24.19 ಎಕರೆ | 6 | 113 |
| ಗ್ರೀನ್ ಫುಡ್ ಪಾರ್ಕ್ ಲಿಮಿಟೆಡ್, ಬಾಗಲಕೋಟೆ (100 acres) | 52.5 ಎಕರೆ | 19 | 2.25 ಎಕರೆ | 8 | 11 |
| ಇನ್ನೋವ ಅಗ್ರಿ ಬಯೋ ಪಾರ್ಕ್, ಮಾಲೂರು (87 acres ) | 50.48 ಎಕರೆ | 15 | 3.08 ಎಕರೆ | 14 | 1 |